೪. ಅಣ್ಣಾಸಾಬ್ ತಾತೋಬ ಜಾಧವ
೫. ಇಲಾಡಿ ಗೈಬುಸಾಬ್ ಮುಲ್ತಾನಿ
೬. ಅಪ್ಪಾಸಾಬ್ ಪೋರೆ
(ಇವರೆಲ್ಲರೂ ನಂದಿಕುರಳಿ ಗ್ರಾಮಸ್ಥರು)

(ಈ) ತನಿಖೆ ಮುಗಿಸಿ ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಜೆ.ಎಂ.ಎಫ್.ಸಿ ರಾಯಬಾಗ್ ಕೋರ್ಟಿಗೆ ದಿನಾಂಕ ೧೨-೧-೧೯೮೭ ರಂದು ಸಲ್ಲಿಸಲಾಗಿದೆ.

ಕರ್ನಾಟಕದಲ್ಲಿ ಹಸಿರು ಕಾರ್ಡು ಹಾಗೂ ಕೆಂಪು ಕಾರ್ಡುಗಳ ಹಂಚಿಕೆಯಲ್ಲಿ ತಾರತಮ್ಯವಾದ ಬಗ್ಗೆ

೧೭೯ (೨೩೨೬) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಕಾನೂನು ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಒಟ್ಟಿಗೆ ಹಸಿರು ಕಾರ್ಡು ಹಾಗೂ ಕೆಂಪು ಕಾರ್ಡುದಾರರ ಸಂಖ್ಯೆ ಎಷ್ಟು ?

(ಆ) ಆರ್ಥಿಕವಾಗಿ ಬಡತನದ ರೇಖೆಯಿಂದ ಕೆಳಗೆ ಇರುವ ಕುಟುಂಬಗಳಿಗೆ ಹಸಿರು ಕಾರ್ಡು ಸರಿಯಾಗಿ ಮುಟ್ಟಲಿಲ್ಲವೆಂದು ದೂರಿದ್ದರೂ ಸರಿಪಡಿಸುವುದರಲ್ಲಿ ಸರ್ಕಾರದವರಿಗೆ ಆಸಕ್ತಿ ಇಲ್ಲದೆ ಇರುವುದಕ್ಕೆ ಕಾರಣಗಳೇನು ?

(ಇ) ಸರ್ಕಾರದವರ ನಿಯಮಗಳನ್ನು ಉಲ್ಲಂಘಿಸಿ ಶ್ರೀಮಂತರು ಪಡೆದಿರುವ ಹಸಿರು ಕಾರ್ಡನ್ನು ವಾಪಸ್ಸು ಪಡೆದು ಶ್ರೀಮಂತರು ಮೋಸಮಾಡಿದ್ದಕ್ಕಾಗಿ ಹಸಿರು ಅಥವಾ ಕೆಂಪು ಕಾರ್ಡನ್ನು ರದ್ದುಗೊಳಿಸುವುದಕ್ಕಾಗಿ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಡವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್(ಆಹಾರ ಮತ್ತು ಕಾನೂನು, ನಾಗರೀಕ ಸರಬರಾಜು ಮಂತ್ರಿಗಳು).—

(ಅ) ರಾಜ್ಯದಲ್ಲಿ ೩೧.೧ ಲಕ್ಷ ಹಸಿರು ಕಾರ್ಡುಗಳನ್ನು ೨೬.೫೬ ಲಕ್ಷ ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ.

(ಆ) ಆರ್ಥಿಕವಾಗಿ ಬಡತನ ರೇಖೆಯಿಂದ ಕೆಳಗೆ ಇರುವ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ಸರಿಯಾಗಿ ಮುಟ್ಟಲಿಲ್ಲವೆಂಬ ದೂರು ಬಂದ ತಕ್ಷಣ ಸರಿಪಡಿಸಲಾಗಿದೆ.

(ಇ) ತಡವಾಗಿಲ್ಲ. ಅನರ್ಹ ಕುಟುಂಬಗಳು ಪಡೆದ ಹಸಿರು ಕಾರ್ಡುಗಳಿನ್ನು ರದ್ದುಗೊಳಿಸಲಾಗಿದೆ.

ಪಟ್ಟಣಗಳಲ್ಲಿ ಹಂಚಿರುವ ಆಹಾರ ಧಾನ್ಯಗಳ ಬಗ್ಗೆ

೧೮೦ (೨೯೮ ಬಿ) ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್.).—ಮಾನ್ಯ ಆಹಾರ ಕಾನೂನು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

(ಅ) ಕರ್ನಾಟಕ ರಾಜ್ಯದ ವಿವಿಧ ಪಟ್ಟಣಗಳಲ್ಲಿ ಹಂಚಿರುವ ಆಹಾರ ಧಾನ್ಯಗಳ ಹಾಗೂ ಅವಶ್ಯಕ ವಸ್ತುಗಳ ತಲಾವಾರು ಪ್ರಮಾಣಗಳೆಷ್ಟು ?

(ಆ) ಜನವರಿ ತಿಂಗಳಲ್ಲಿ ಬೆಂಗಳೂರು ಮತ್ತು ಕೆ. ಜಿ. ಎಫ್. ನಲ್ಲಿ ತಲಾವಾರು ಹಂಚಲಾದ ಆಹಾರ ಧಾನ್ಯಗಳ ಪ್ರಮಾಣ?

(ಇ) ಕರ್ನಾಟಕ ರಾಜ್ಯದ ನಾನಾ ಪಟ್ಟಣಗಳಿಗೆ ಭಿನ್ನವಾಗಿ ಆಹಾರ ಧಾನ್ಯಗಳ ಹಂಚಿಕೆ ಮಾಡುತ್ತಿರುವುದಕ್ಕೆ ಆಧಾರವೇನು ?